ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : **38/2025**

ಚಾ.ಸಾ. :-**2**
ಪ್ರಾ.ಸಾ. :-**2**

| | |
|---|---|
| ಹೆಸರು | : ರುಸ್ತುಮ್ ಮಲ್ಲಿಕ್ |
| ತಂದೆಯ ಹೆಸರು | : ಆಸಿನ್ ಮಲ್ಲಿಕ್ |
| ವಯಸ್ಸು | : 41 ವರ್ಷ |
| ಉದ್ಯೋಗ | : ಅಕ್ಕಸಾಲಿಗ |
| ವಾಸಸ್ಥಳ | : ಮೈಸೂರು |

---

ಪ್ರಮಾಣೀಕರಿಸಲಾದ ದಿನಾಂಕಃ- **10.08.2026**

*(ಸಾಕ್ಷಿಗೆ ಕನ್ನಡ ಮಾತನಾಡಲು ಬರದ ಕಾರಣ ಆರೋಪಿ ಪರ ವಕೀಲರು ಹಾಗೂ ಸ.ಸ.ಅ.ರವರ ಸಮ್ಮತಿಯ ಮೇರೆಗೆ ಕನ್ನಡ ಹಾಗೂ ಹಿಂದಿ ಬರುವಂತಹ ಚಾ.ಸಾ-1 ರವರ ತರ್ಜುಮೆ ಆಧಾರದ ಮೇಲೆ ಸಾಕ್ಷಿ ದಾಖಲು ಮಾಡಲಾಯಿತು ಹಾಗೂ ಸಂಬಂಧಿಸಿದವರಿಗೆ ಪ್ರಮಾಣ ಮಾಡಿಸಲಾಯಿತು.)*

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>

ಮೃತ ಶೇಖ್ ಸರ್ಫೋಜ್ ಉದ್ದೀನ್ ನನ್ನ ಸ್ನೇಹಿತನ ತಮ್ಮ. ಚಾ.ಸಾ-1 ರವರನ್ನು ಅಪಘಾತವಾದ ದಿನ ಮೊದಲ ಬಾರಿಗೆ ನೋಡಿರುತ್ತೇನೆ. ದಿನಾಂಕಃ 08.06.2025 ರಂದು ನಾನು ಮತ್ತು ಮೃತ ಶೇಖ್ ಸರ್ಫೋಜ್ ಉದ್ದೀನ್ ರವರು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದೆವು. ಮಧ್ಯಾಹ್ನ ಸುಮಾರು 2.00-2.30 ರ ಸಮಯದಲ್ಲಿ ನಾನು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಬಂದಂತಹ ಬಸ್ ಡಿಕ್ಕಿಪಡಿಸಿರುತ್ತದೆ. ನಾನು ರಸ್ತೆಯ ಎಡಭಾಗದಲ್ಲಿ ವಾಹನವನ್ನು ಚಲಾಯಿಸುತ್ತಿದ್ದೆ. ಅಪಘಾತಪಡಿಸುವುದಕ್ಕೂ ಮುಂಚೆ

ನಾನು ನನಗೆ ಡಿಕ್ಕಿಪಡಿಸಿದ ಬಸ್ಸನ್ನು ದ್ವಿಚಕ್ರ ವಾಹನದ ಕನ್ನಡಿಯಲ್ಲಿ ಗಮನಿಸಿರುವುದಿಲ್ಲ. ಅಪಘಾತಪಡಿಸಿದ ನಂತರ ಕೆಳಕ್ಕೆ ಬಿದ್ದಿದ್ದು, ನಂತರದಲ್ಲಿ ನಾನು ಬಸ್ಸನ್ನು ಗಮನಿಸಿರುತ್ತೇನೆ. ಕೆಳಕ್ಕೆ ಬಿದ್ದ 3-4 ಸೆಕೆಂಡ್ ಗಳ ನಂತರ ನಾನು ಬಸ್ಸನ್ನು ಗಮನಿಸಿರುತ್ತೇನೆ. ಮೃತ ಶೇಖ್ ಸರ್ಫೋಜ್ ಉದ್ದೀನ್ ರವರಿಗೆ ತಲೆಗೆ ಗಾಯವಾಗಿತ್ತು. ಅಪಘಾತವಾದ ನಂತರ 5 ರಿಂದ 7 ಸೆಕೆಂಡ್ ಗಳ ಕಾಲ ನನಗೆ ಪ್ರಜ್ಞೆ ಇತ್ತು, ನಂತರ ನಾನು ಪ್ರಜ್ಞೆ ಕಳೆದುಕೊಂಡಿರುತ್ತೇನೆ, ಸ್ವಲ್ಪ ಸಮಯದ ನಂತರ ನನಗೆ ಸ್ಥಳದಲ್ಲಿಯೇ ಪ್ರಜ್ಞೆ ಬಂದಿರುತ್ತದೆ. ಸ್ಥಳಕ್ಕೆ ಸಾರ್ವಜನಿಕರು ಬಂದಿರುತ್ತಾರೆ. ಚಾ.ಸಾ-1 ರವರು ಸಹ ಸ್ಥಳದಲ್ಲಿದ್ದರು. ಚಾ.ಸಾ-1 ರವರಿಗೆ ನಾನು ಬಸ್ಸಿನ ಬಗ್ಗೆ ಏನು ಹೇಳಿರುತ್ತೇನೆಂದು ನೆನಪಿಲ್ಲ.

ಸಾರ್ವಜನಿಕರು ನನ್ನನ್ನು ಶ್ರೀರಂಗಪಟ್ಟಣ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ಅದೇ ದಿನ ರಾತ್ರಿ 7.00 ಗಂಟೆಯ ನಂತರ ನಾನು ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತೇನೆ. ಅಪಘಾತದ ಬಗ್ಗೆ ನಾನು ಪೊಲೀಸರಿಗೆ ಹಿಂದಿಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ಅಪಘಾತದ ನಂತರ ನನಗೆ ಗಾಯಗಳಾಗಿದ್ದು, ತಕ್ಷಣವೇ ನನಗೆ ಯಾವ ಬಸ್ ಅಪಘಾತಪಡಿಸಿತು ಎಂದು ಗುರುತಿಸಲಾಗಿರುವುದಿಲ್ಲ. ಪೊಲೀಸರು ನನಗೆ ಯಾವ ಬಸ್ ಅಪಘಾತಪಡಿಸಿರುತ್ತದೆ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲು **:** ಆರೋಪಿ ಪರ ವಕೀಲರಿಂದ **:**</u>

ನಾನು ಆ ದಿನ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನ ಎಸ್.ಕೆ.ಅಸ್ಲಾಂ ರವರಿಗೆ ಸೇರಿದ್ದು ಎಂದರೆ ಸರಿ. ನನಗೆ ಚಾಲನಾ ಪರವಾನಗಿ ಇದ್ದು ಅದನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ನಾನು ಕೆಂಪು ಬಣ್ಣದ ವಾಹನ ಅಪಘಾತಪಡಿಸಿರುತ್ತದೆ ಎಂದು ಹೇಳಿದ್ದೆ ಎಂದರೆ ಸರಿ. ನಾನು ಶ್ರೀರಂಗಪಟ್ಟಣ ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಂತರದಲ್ಲಿಯೂ ಸಹ ನಾನು ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿರುತ್ತೇನೆ, ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನನ್ನ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದರೆ ಸುಳ್ಳು.

<u>ಮರು ವಿಚಾರಣೆ **:**</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**

ನನಗೆ ಹಿಂದಿ ಹಾಗೂ ಕನ್ನಡ ಭಾಷೆ ಬರುತ್ತದೆ. ಈ ದಿನ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಹಿಂದಿಯಿಂದ ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದು, ಅದು ಸತ್ಯವಾಗಿರುತ್ತದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ತರ್ಜುಮೆದಾರರ ಸಹಿ.**